## ಪ್ರಾರ್ಥನೆ

# ಶ್ರೀರಾಮಕೃಷ್ಣ ಸುಪ್ರಭಾತಮ್ - ೧

**ಶ್ರೀರಾಜಮಾನ ಮುಖನಿರ್ಗತದಿವ್ಯಭಾನೋ**
**ಘೋರಾಜ್ಞತಾಂಧತಮಸೋತ್ಕರಚಂಡಭಾನೋ ।**
**ಸ್ವಾರಾಜ್ಯಸೌಖ್ಯದನಿಜಾಂಘ್ರಿಜುಷಾಮಜಸ್ರಂ**
**ಶ್ರೀರಾಮಕೃಷ್ಣ ಭಗವನ್ ತವ ಸುಪ್ರಭಾತಮ್ ॥ ೧ ॥**

ಶ್ರೀಲಕ್ಷ್ಮೀದೇವಿಯೊಂದಿಗೆ ಬೆಳಗುತ್ತಿರುವ ಶ್ರೀವಿಷ್ಣುವು ನೀಡಿದ ಭರವಸೆಯಂತೆ ಅವತಾರವಾಗಿ ಉದಯಿಸಿದ ದಿವ್ಯಸೂರ್ಯನೆ, ಘೋರ ಅಜ್ಞಾನಾಂಧಕಾರವನ್ನು ನಿರ್ಮೂಲ ಮಾಡುವ ಪ್ರಚಂಡಸೂರ್ಯನೆ, ನಿನ್ನ ಪಾದಗಳನ್ನಾಶ್ರಯಿಸಿ ಆನಂದಿಸುವವರಿಗೆ ಸ್ವಾರಾಜ್ಯಸುಖವನ್ನು ಸದಾ ಕರುಣಿಸುವವನೆ, ಹೇ ಶ್ರೀರಾಮಕೃಷ್ಣ ಭಗವಂತ, ನಿನಗೆ ಸುಪ್ರಭಾತ.

**ಸಂಸಾರತಾಪವಿವಶಾಖಿಲಮಾನವಾನಾಂ**
**ಕಂಸಾರಿನಾಮಜಪಭೇಷಜರತ್ನದಾಯಿನ್ ।**
**ಹಿಂಸಾ ಮನೋವಚನಕಾಯಗತಾಂ ವಿಧುನ್ವನ್**
**ಶ್ರೀರಾಮಕೃಷ್ಣ ಭಗವನ್ ತವ ಸುಪ್ರಭಾತಮ್ ॥ ೨ ॥**



ಸಂಸಾರದ ತಾಪಕ್ಕೆ ಸಿಲುಕಿ, ಅವುಗಳಿಗೆ ಅಧೀನರಾಗಿ ತಮ್ಮತನವನ್ನೇ ಕಳೆದುಕೊಂಡಿರುವ ಸಕಲ ಮಾನವರಿಗೆ ಯಾವುದೇ ಭೇದಭಾವವಿಲ್ಲದೆ ಕೃಷ್ಣನಾಮಜಪವೆಂಬ ಶ್ರೇಷ್ಠ ಔಷಧವನ್ನು ಕರುಣಿಸಿದ, ಶರೀರ-ಮನಸ್ಸು-ಮಾತುಗಳಲ್ಲಿ ಅವರು ಅನುಭವಿಸುತ್ತಿರುವ ಹಿಂಸೆಯನ್ನು ಹೋಗಲಾಡಿಸಿದ ಶ್ರೀರಾಮಕೃಷ್ಣ ಪ್ರಭುವೆ, ನಿನಗೆ ಸುಪ್ರಭಾತ.

**ಕಾಲೀನಿಷೇವಣಪರಾಯಣ ನೈಕಶೋಕ**
**ಪಾಲೀವಶಾವಶಜನಾವನಬದ್ಧಬುದ್ಧೇ**
**ನಾಲೀಕನೇತ್ರ, ಕರುಣಾಮೃತಪೂರಿತಾತ್ಮನ್**
**ಶ್ರೀರಾಮಕೃಷ್ಣ ಭಗವನ್ ತವ ಸುಪ್ರಭಾತಮ್ ॥ ೩ ॥**

ಕಾಳೀದೇವಿಯ ಸೇವೆಯಲ್ಲಿ ಸಂಪೂರ್ಣ ನಿರತನಾಗಿರುವ, ಅನೇಕ ಶೋಕಪರಂಪರೆಗೆ ಅಧೀನರಾಗಿರುವ ಜನರನ್ನು ಕಾಪಾಡಲೇಬೇಕೆಂಬ ಸಂಕಲ್ಪವುಳ್ಳ, ಕಮಲದಂತಹ ಸುಂದರ ಕಣ್ಣುಗಳನ್ನು ಹೊಂದಿರುವ, ಕರುಣೆಯೆಂಬ ಅಮೃತವನ್ನು ಪೂರ್ಣವಾಗಿ ತುಂಬಿಕೊಂಡಿರುವ ಶ್ರೀರಾಮಕೃಷ್ಣ ದೇವ, ನಿನಗೆ ಸುಪ್ರಭಾತ.

**- ಸ್ವಾಮಿ ಜ್ಞಾನಾನಂದ ಸರಸ್ವತೀ**

## ಸೂಕ್ತಿಪ್ರಭ

# ಉಪನಿಷತ್ ಸೂಕ್ತಿಗಳು

ಈ ಪ್ರಪಂಚದಲ್ಲಿ ಕರ್ಮಗಳನ್ನು ಮಾಡುತ್ತ ನೂರು ವರ್ಷಗಳವರೆಗೆ ಬದುಕುವುದನ್ನು ಮನುಷ್ಯನು ಬಯಸಬೇಕು. ಹೀಗೆ ಮಾಡುವುದರಿಂದ ಅವನಿಗೆ ಕರ್ಮಲೇಪವುಂಟಾಗುವುದಿಲ್ಲ.

**- ಈಶಾವಾಸ್ಯೋಪನಿಷತ್ತು, ೨**

ಯಾವಾಗ ಒಬ್ಬಾತನು ತನ್ನ ಪ್ರತಿಯೊಂದು ಆಲೋಚನೆಯಲ್ಲೂ ಬ್ರಹ್ಮವನ್ನೇ ಕಾಣುತ್ತಾನೋ ಆಗ ಅವನು ಅಮೃತತ್ವವನ್ನು ಹೊಂದುತ್ತಾನೆ. ಇಂಥ ಆತ್ಮನನ್ನು ತಿಳಿಯುವುದರಿಂದ ಅವನು ಶಕ್ತಿಸಂಪನ್ನನಾಗುತ್ತಾನೆ.

**-ಕೇನೋಪನಿಷತ್ತು , ೨.೪**

ಸತ್ಯವೇ ಜಯಿಸುತ್ತದೆ, ಅಸತ್ಯವಲ್ಲ. ಆ ಪರಮ ಸತ್ಯದ ನೆಲೆಯನ್ನು ಹೊಂದಲು ಋಷಿಗಳು ಹೋಗುವ ಪಥವು ಸತ್ಯದಿಂದ ಹರಡಿರುತ್ತದೆ.

**-ಮುಂಡಕೋಪನಿಷತ್ತು , ೩.೧.೬**

ಶ್ರೇಯಸ್ಸಿನ ಮಾರ್ಗ ಹಾಗೂ ಪ್ರೇಯಸ್ಸಿನ (ಪ್ರಿಯವಾದ ವಸ್ತುಗಳ) ಮಾರ್ಗ ಇವೆರಡೂ ಬೇರೆ ಬೇರೆ. ಶ್ರೇಯಸ್ಸನ್ನು ಆರಿಸಿಕೊಂಡವನಿಗೆ ಒಳ್ಳೆಯದಾಗುತ್ತದೆ, ಪ್ರೇಯಸ್ಸನ್ನು ಆರಿಸಿಕೊಳ್ಳುವವನು ಪುರುಷಾರ್ಥದಿಂದ ಚ್ಯುತಿ ಹೊಂದಿ ಪತಿತನಾಗುತ್ತಾನೆ.

**-ಕಠೋಪನಿಷತ್ತು , ೨.೧**

ಸತ್ಯವನ್ನೇ ಆಡು, ಧರ್ಮವನ್ನೇ ಆಚರಿಸು. ಸ್ವಾಧ್ಯಾಯ (ಅಧ್ಯಯನ)ವನ್ನು ಮರೆಯಬೇಡ. ಯಾವ ಕರ್ಮಗಳು ನಿಂದಿತವಲ್ಲವೋ ಅವುಗಳನ್ನು ಮಾಡಬೇಕು. ಉಳಿದವನ್ನು ಮಾಡಬಾರದು.

**-ತೈತ್ತಿರೀಯೋಪನಿಷತ್ತು , ೧.೧೧**

ಇದೆಲ್ಲವೂ ಬ್ರಹ್ಮವೇ.

**-ಛಾಂದೋಗ್ಯೋಪನಿಷತ್ತು , ೩.೧೪.೧**

ಎಳ್ಳಿನಲ್ಲಿರುವ ಎಣ್ಣೆಯಂತೆ, ಮೊಸರಿನಲ್ಲಿರುವ ತುಪ್ಪದಂತೆ, ಒಣಗಿದ ನದೀತಳದಲ್ಲಿರುವ ನೀರಿನಂತೆ, ಅರಣಿಯಲ್ಲಿರುವ ಅಗ್ನಿಯಂತೆ ಯಾವನು ಆತ್ಮನನ್ನು ಸತ್ಯದಿಂದಲೂ ತಪಸ್ಸಿನಿಂದಲೂ ಸಾಕ್ಷಾತ್ಕರಿಸಿಕೊಳ್ಳುತ್ತಾನೋ ಅವನಿಂದ ಈ ಆತ್ಮನು ತನ್ನಲ್ಲಿಯೇ ಗ್ರಹಿಸಲ್ಪಡುತ್ತಾನೆ.

**-ಶ್ವೇತಾಶ್ವತರೋಪನಿಷತ್ತು , ೧.೧೫**